ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರಃ 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪರಮೇಶ್ವರ ಎ. ಹೆಗಡೆ | ಚಾಸಾಃ 12 |
| ತಂದೆಯ ಹೆಸರು | : | ಅನಂತ ಹೆಗಡೆ | ಫ್ರಾಸಾಃ 4 |
| ಪ್ರಾಯ | : | 56 ವರ್ಷ | ದಿನಾಂಕಃ 17.11.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ | |
| ವಾಸಸ್ಥಳ | : | ದಾವಣಗೆರೆ | |

(ಸಾಕ್ಷಿಯು ವಿಡಿಯೋ ಕಾನ್ಪರೆನ್ಸ್ ಮೂಲಕ ಸಾಕ್ಷ್ಯವನ್ನು ನುಡಿದಿರುತ್ತಾರೆ).

ಸಾಕ್ಷಿಯು ತಮ್ಮ ಕಚೇರಿಯಲ್ಲಿರುವ ವಿಡಿಯೋ ಕಾನ್ಪರೆನ್ಸ್ ಕೊಠಡಿಯಲ್ಲಿ ಹಾಜರಿದ್ದು **ಮಂಜುನಾಥ – ಹೆಚ್.ಸಿ 82** ಇವರನ್ನು ರಿಮೋಟ್ ಪಾಯಿಂಟ್ ಕೋ–ಆರ್ಡಿನೋಟರ್ ಎಂದು ನೇಮಿಸಿಲಾಯಿತು. ವಿಡಿಯೋ ಕಾನ್ಪರೆನ್ಸ್ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಜಿಟ್ಸಿಮೀಟ್ https://meet.jit.si/dpmng ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್‌ವರ್ಕ್ ನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿಗಳು ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು 02 ಏಪ್ರಿಲ್ 2021 ರಿಂದ ಜನವರಿ 2023 ರವರೆಗೆ ಮಂಗಳೂರು ಕೇಂದ್ರ ಉಪವಿಭಾಗ, ಮಂಗಳೂರಿನಲ್ಲಿ ಸಹಾಯಕ ಪೊಲೀಸ್ ಆಯುಕ್ತಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿ. 10.06.2021 ರಂದು ಸಂಜೆ ಸುಮಾರು 5.30 ಗಂಟೆಗೆ ಚಾಸಾ–1 ರವರು ನ್ಯಾಯಾಲಯದ ವಿ.ಸಿ ಯಲ್ಲಿ ಕಾಣಿಸುವ

ಆರೋಪಿಯನ್ನು ಮತ್ತು ಪಂಚರಾದ ಘ್ರಾಸಾ-1 ಮತ್ತು ಚಾಸಾ-4 ರವರನ್ನು ನಮ್ಮ ಕಚೇರಿಯಲ್ಲಿ ನನ್ನ ಮುಂದೆ ಹಾಜರುಪಡಿಸಿ ಅಂಗಶೋಧನೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಕೋರಿಕೆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

3. ಆರೋಪಿಯು ಮಲೆಯಾಳಂ ಭಾಷೆ ಮಾತನಾಡುತ್ತಿದ್ದರಿಂದ ಆತನನ್ನು ಚಾಸಾ-14 ರವರ ಮೂಲಕ ವಿಚಾರಿಸಿರುತ್ತೇನೆ. ಆರೋಪಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಿರುತ್ತೇನೆ. ಚಾಸಾ-1 ರವರು ಆರೋಪಿಗೆ ಕೊಟ್ಟ ನೋಟಿಸ್ ಮತ್ತು ಉತ್ತರವನ್ನು ನನಗೆ ತೋರಿಸಿರುತ್ತಾರೆ. ಆಗ ನಾನು ಆರೋಪಿಗೆ ನಾನು ಪತ್ರಾಂಕಿತ ಅಧಿಕಾರಿಯಾಗಿದ್ದು ಅಂಗ ಶೋಧನೆ ಮಾಡಬಹುದೆ ಎಂದು ಮೌಖಿಕವಾಗಿ ಕೇಳಿರುತ್ತೇನೆ. ಅದಕ್ಕೆ ಆರೋಪಿಯು ಒಪ್ಪಿರುತ್ತಾರೆ.

4. ನಾನು ಅಂಗ ಶೋಧನೆಯನ್ನು ಪ್ರಾರಂಭಿಸಿದಾಗ ಆರೋಪಿಯು ತನ್ನ ಟೀ ಶರ್ಟ್ ನ ಎಡ ಬದಿಯ ಜೇಬಿನಿಂದ ಒಂದು ಪ್ಲಾಸ್ಟಿಕ್ ಕವರ್ ನ್ನು ತೆಗೆದು ನನ್ನ ಮುಂದೆ ಹಾಜರುಡಿಸಿರುತ್ತಾನೆ. ಆಗ ಅದರಲ್ಲಿ ಏನು ಇದೆ ಎಂದು ಪಂಚರ ಸಮಕ್ಷಮ ಆರೋಪಿಯನ್ನು ವಿಚಾರಿಸಿದಾಗ ಅದರಲ್ಲಿ ಎಲ್.ಎಸ್.ಡಿ ಎನ್ನುವ ಮಾದಕವಸ್ತು ಸ್ಟಾಂಪ್ ರೂಪದಲ್ಲಿ ಇರುತ್ತದೆ ಎಂದು ಹೇಳಿರುತ್ತಾನೆ.

5. ಸದರಿ ಕವರ್ ನ್ನು ತೆಗೆದು ನೋಡಿದಾಗ ಅದರಲ್ಲಿ ಸ್ಟಾಂಪ್ ರೂಪದಲ್ಲಿ ಇರುವ ಮೂರು ಹಾಳೆಗಳು ಕಂಡು ಬಂದಿರುತ್ತದೆ. ಮೊದಲನೇ ಹಾಳೆಯಲ್ಲಿ ಈಶ್ವರನ ಚಿತ್ರ ಇದ್ದು ಅದರಲ್ಲಿ 280 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದವು. ಸದರಿ ಮೊದಲನೇ ಹಾಳೆಯು 18X12.5 cm ಆಗಿತ್ತು. ಪ್ರತಿಯೊಂದು ಸ್ಟಾಂಪ್ ಗಳು ಒಂದು ಸೆಂಟಿಮೀಟರ್ ಉದ್ದ

ಇದ್ದವು, ಅದರ ತೂಕ 4.75 ಗ್ರಾಂ ಆಗಿತ್ತು.

6. ಎರಡನೇ ಹಾಳೆಯನ್ನು ಪರಿಶೀಲಿಸಿದಾಗ ಸೈಕಲ್ ಮೇಲೆ ಸವಾರಿ ಮಾಡುತ್ತಿರುವ ನಗ್ನ ಮಹಿಳೆಯ ಚಿತ್ರ ಇದ್ದು ಅದರಲ್ಲಿ 420 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದವು. ಸದರಿ ಎರಡನೇ ಹಾಳೆಯು 16X16.5 cm ಆಗಿತ್ತು. ಪ್ರತಿಯೊಂದು ಸ್ಟಾಂಪ್ ಗಳು 0.8 ಸೆಂಟಿಮೀಟರ್ ಉದ್ದ ಇದ್ದವು, ಅದರ ತೂಕ 8 ಗ್ರಾಂ 1 ಮಿಲಿಗ್ರಾಂ ಆಗಿತ್ತು.

7. ಮೂರನೇ ಹಾಳೆಯನ್ನು ಪರಿಶೀಲಿಸಿದಾಗ ಹೂವು ಮತ್ತು ಎಲೆಗಳು ಇರುವ ಡಿಸೈನ್ ಚಿತ್ರ ಇದ್ದು ಅದರಲ್ಲಿ 140 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದವು. ಪ್ರತಿಯೊಂದು ಸ್ಟಾಂಪ್ ಗಳು 0.8 ಸೆಂಟಿಮೀಟರ್ ಉದ್ದ ಇದ್ದವು, ಅದರ ತೂಕ 2 ಗ್ರಾಂ 3 ಮಿಲಿಗ್ರಾಂ ಆಗಿತ್ತು.

8. ಹೀಗೆ ಒಟ್ಟು 840 ಎಲ್.ಎಸ್.ಡಿ ಸ್ಟಾಂಪ್ ಗಳು ಇದ್ದು ಅವುಗಳ ಒಟ್ಟು ತೂಕ 15 ಗ್ರಾಂ 15 ಮಿಲಿಗ್ರಾಂ ಇತ್ತು. ಆರೋಪಿಯನ್ನು ವಿಚಾರಿಸಿದಾಗ ಅವುಗಳನ್ನು ಮಾರಾಟ ಮಾಡಲು ಅಥವಾ ವಶದಲ್ಲಿ ಇರಿಸಿಕೊಳ್ಳಲು ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ ಮತ್ತು ಅವುಗಳನ್ನು ಮಾರಾಟ ಮಾಡು ಉದ್ದೇಶದಿಂದ ಇಟ್ಟು ಕೊಂಡಿರುವುದಾಗಿ ತಿಳಿಸಿರುತ್ತಾನೆ. ಹಾಗೆಯೆ ಮುಂದುವರೆದು ವಿಚಾರಿಸಿದಾಗ ಆರೋಪಿಯು ಒಂದು ಸ್ಟಾಂಪ್ ಗೆ ರೂ.2,000/– ಗಳಂತೆ ಮಾರಾಟ ಮಾಡವುದಾಗಿ ತಿಳಿಸಿರುತ್ತಾನೆ.

9. ನಂತರ ಪಂಚರ ಸಮಕ್ಷಮ ಅವುಗಳನ್ನು ಪಾರದರ್ಶಕ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಸದರಿ ಪ್ಲಾಸ್ಟಿಕ್ ಕವರ್ ನ್ನು ಬಿಳಿ ಬಟ್ಟೆಯಲ್ಲಿ ಇಟ್ಟು ಹೊಲೆದು ಸಿಸಿಬಿ ಎಂದು ಅರಗು ಸೀಲ್ ಹಾಕಿ ಅದರ ಮೇಲೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿರುತ್ತದೆ. ಅದಕ್ಕೆ "A–1" ಎಂದು ಗುರುತು ಸಂಖ್ಯೆಯನ್ನು ನೀಡಲಾಗಿರುತ್ತದೆ.

10. ಆರೋಪಿಯ ಹಾಫ್ ಪ್ಯಾಂಟ್ ನ ಬಲ ಕಿಸೆಯಿಂದ ಒಂದು ರೆಡ್ ಮೀ ಕಂಪನಿಯ ನೀಲಿ ಬಣ್ಣದ ನೋಟ್ 7 ಮೊಬೈಲ್ ನ್ನು ಹಾಜರುಪಡಿಸಿದ್ದು ಅದನ್ನು envelope ಕವರ್ ನಲ್ಲಿ ಹಾಕಿ ಅದಕ್ಕೆ ಸಿಸಿಬಿ ಅರಗು ಸೀಲ್ ನ್ನು ಹಾಕಿ ಪ್ಯಾಕ್ ಮಾಡಿ ಅದರ ಮೇಲೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿರುತ್ತದೆ. ಅದಕ್ಕೆ "A-2" ಎಂದು ಗುರುತು ಸಂಖ್ಯೆಯನ್ನು ನೀಡಲಾಗಿರುತ್ತದೆ. ಆ ಮೊಬೈಲ್ ನಲ್ಲಿ ಏರ್ಟೆಲ್ ಕಂಪನಿಯ ಸಿಮ್ ಇದ್ದು ಅದರ ನಂಬರ್ 6366296092 ಆಗಿತ್ತು .

11. ಆರೋಪಿಯ ಹಾಫ್ ಪ್ಯಾಂಟ್ ನ ಎಡ ಕಿಸೆಯಿಂದ ಒಂದು ನೋಕಿಯಾ ಕಪ್ಪು ಬಣ್ಣದ 1100 ಕೀಪ್ಯಾಡ್ ಮೊಬೈಲ್ ನ್ನು ಹಾಜರುಪಡಿಸಿದ್ದು ಅದನ್ನು ಇನ್ನೊಂದು envelope ಕವರ್ ನಲ್ಲಿ ಹಾಕಿ ಅದಕ್ಕೆ ಸಿಸಿಬಿ ಎಂದು ಅರಗು ಸೀಲ್ ನ್ನು ಹಾಕಿ ಪ್ಯಾಕ್ ಮಾಡಿ ಅದರ ಮೇಲೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿರುತ್ತದೆ. ಅದಕ್ಕೆ "A-3" ಎಂದು ಗುರುತು ಸಂಖ್ಯೆಯನ್ನು ನೀಡಲಾಗಿರುತ್ತದೆ.

12. ಇವುಗಳನ್ನು ಹೊರತುಪಡಿಸಿ ಆರೋಪಿಯ ಅಂಗಶೋಧನೆಯಿಂದ ಬೇರೆ ವಸ್ತುಗಳು ಸಿಕ್ಕಿರುವುದಿಲ್ಲ.

13. ಸದರಿ ಮಹಜರನ್ನು ಸಂಜೆ 5.45 ರಿಂದ 6.45 ಗಂಟೆಯವರೆಗೆ ಮಾಡಲಾಗಿರುತ್ತದೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದೂ ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3 ನ್ನು ಚಾಸಾ-14 ರವರು ಆರೋಪಿಗೆ ಮಲೆಯಾಳಂ ಭಾಷೆಗೆ ತರ್ಜುಮೆ ಮಾಡಿ ಹೇಳಿರುತ್ತಾರೆ. ನಿಪಿ-3 ರ ಮೇಲೆ ಆರೋಪಿಯು ತನ್ನ ಸಹಿಯನ್ನು ಮಾಡಿರುತ್ತಾನೆ. ಆರೋಪಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

14. ಸದರಿ ರೆಡ್ ಮೀ ಕಂಪನಿಯ ನೀಲಿ ಬಣ್ಣದ ನೋಟ್ 7 ಮೊಬೈಲ್ ನ್ನು ನೋಡುತ್ತಿದ್ದು ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು. ಮು.ಮಾ–1 ರ ಮೇಲೆ ಇರುವ ಚೀಟಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು.

15. ನೋಕಿಯಾ ಕಪ್ಪು ಬಣ್ಣದ 1100 ಕೀಪ್ಯಾಡ್ ಮೊಬೈಲ್ ನ್ನು ನೋಡುತ್ತಿದ್ದು ಎಂದು ನೋಡುತ್ತಿದ್ದು ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು. ಮು.ಮಾ–2 ರ ಮೇಲೆ ಇರುವ ಚೀಟಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ–5(ಬಿ) ಎಂದು ಗುರುತಿಸಲಾಯಿತು.

16. ಆರೋಪಿ ಮತ್ತು ಸ್ವತ್ತುಗಳನ್ನು ಚಾಸಾ–1 ರವರ ಸ್ವಾಧೀನಕ್ಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ.ಆರ್.ಎ ವಕೀಲರಿಂದ ಶ್ರೀ ಎಂ.ಡಿ, ವಕೀಲರ ಪರವಾಗಿಃ**

17. ನಾನು ಎನ್.ಡಿ.ಪಿ.ಎಸ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪಿ.ಎಸ್.ಐ ಮತ್ತು ಎಸ್.ಐ ಆಗಿದ್ದಾಗ ದೂರದಾರನಾಗಿ ಮತ್ತು ತನಿಖಾಧಿಕಾರಿಯಾರಿ ಕೆಲಸ ಮಾಡಿರುತ್ತೇನೆ. ಸಿಸಿಬಿ ಕಚೇಯು ನಮ್ಮ ಕಚೇರಿಯಿಂದ ಸುಮಾರು ಒಂದು ಕಿ.ಮೀ ದೂರದಲ್ಲಿ ಇದ್ದು ಅದು ನಮ್ಮ ವಲಯದಲ್ಲಿ ಬರುತ್ತದೆ. ಆದರೆ ಅದು ನನ್ನ ಅಧೀನದಲ್ಲಿ ಬರುವುದಿಲ್ಲ.

18. ನಾನು ಮಂಗಳೂರಿನಲ್ಲಿ ಎ.ಸಿ.ಪಿ ಆಗಿದ್ದಾಗಿನ ಮೂರು ವರ್ಷಗಳಲ್ಲಿ ನಾನು ವಾಣಿಜ್ಯ ಪ್ರಮಾಣದ ಮಾದಕವಸ್ತು ಪ್ರಕರಣಗಳಲ್ಲಿ 19 ಕ್ಕೂ ಮಿಕ್ಕಿದ ಪ್ರಕರಣಗಳಲ್ಲಿ ನಾನು ಪತ್ರಾಂಕಿತ ಅಧಿಕಾರಿಯಾಗಿ ಕೆಲಸ ಮಾಡಿರುತ್ತೇನೆ.

Spl. C. 11/2022
CW - 12, PW - 4

19. ಚಾಸಾ–1 ರವರು 1 ನೇ ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ಅಂಗಶೋಧನೆ ಕೋರಿಕೆ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಯಾವುದೇ ಸ್ಟ್ಯಾಂಪ್ ಗಳನ್ನಾಗಲಿ ಅಥವಾ ಮೊಬೈಲ್ ಗಳನ್ನು ಹಾಜರುಪಡಿಸಿರುವುದಿಲ್ಲ ಎಂರದೆ ಸರಿಯಲ್ಲ. 1 ನೇ ಆರೋಪಿಯು ನನ್ನ ಮುಂದೆ ಯಾವುದೇ ವಿಷಯಗಳನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ನಮ್ಮ ಕೆಳಗಿನ ಅಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.